ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು):-

(ಅ) ಸುಮಾರು 1900 ಕೋಟಿ ರೂ.ಗಳು

(ಆ) ಇಲ್ಲ

(ಇ) ಐ.ಎಂ.ಎಫ್.ಎಲ್. ಮೇಲಿನ ಸುಂಕದ ದರಗಳನ್ನು ಹೆಚ್ಚಿಸಿರುವುದಿಲ್ಲ

(ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ

412. **ಶ್ರೀ ವಿ. ಸೋಮಣ್ಣ:-** ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2006-07 ರಲ್ಲಿ ಬೆಂಗಳೂರಿನ ರೇಸ್‌ಕೋರ್ಸ್‌ನಿಂದ ಬಂದ ವರಮಾನವೆಷ್ಟು;

(ಆ) ಈ ರೇಸ್‌ಕೋರ್ಸ್ ಅನ್ನು ಸ್ಥಳಾಂತರಿಸಲು ಸರ್ಕಾರ ಉದ್ದೇಶಿಸಿದೆಯೇ;

(ಇ) ರಾಜ್ಯದಲ್ಲಿ ಕುದುರೆ ಜೂಜನ್ನು ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು):-

(ಅ) ನೆಲಬಾಡಿಗೆ ರೂಪದಲ್ಲಿ

1-1-2006 ರಿಂದ 31-12-2006ರವರೆಗೆ ... ರೂ. 19.40 ಲಕ್ಷ

ಬೆಟ್ಟಿಂಗ್ ತೆರಿಗೆ ಮನರಂಜನೆ ತೆರಿಗೆ

ಲೈಸೆನ್ಸ್‌ಫೀ ರಾಜಿ ತೆರಿಗೆ ಮೊತ್ತ ... ರೂ. 34.13 ಕೋಟಿ

(2006-07ಕ್ಕೆ)

(ಆ) ಸದ್ಯಕ್ಕೆ ಪರಿಗಣನೆಯಲ್ಲಿರುವುದಿಲ್ಲ

(ಇ) ಪರಿಶೀಲನೆಯಲ್ಲಿದೆ.

864. ಶ್ರೀ ಸುನೀಲ್ ಕುಮಾರ್ ವಿ. :- ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಪ್ರತಿ ಒಂದು ಸಾವಿರ ಬೀಡಿಗೆ ಎಷ್ಟು ಅಬಕಾರಿ ಸುಂಕ ವಿಧಿಸಿದೆ ಹಾಗೂ ಈ ಬಾರಿಯ ಆಯವ್ಯಯದಲ್ಲಿ ಹೆಚ್ಚುವರಿಯಾಗಿ ಅಬಕಾರಿ ಸುಂಕವೇನಾದರೂ ವಿಧಿಸಿದೆಯೇ ಹಾಗಿದ್ದಲ್ಲಿ, ವಿವರ ನೀಡುವುದು?

(ಆ) ರಾಜ್ಯ ಸರ್ಕಾರವು ಸಹ ಈ ಸಾಲಿನ ಆಯವ್ಯಯದಲ್ಲಿ ಬೀಡಿಯ ಮೇಲೆ ಎಷ್ಟು ವ್ಯಾಟನ್ನು ವಿಧಿಸಿದೆ, ಹಾಗಿಲ್ಲದಿದ್ದರೆ, ಆಯವ್ಯಯದಲ್ಲಿ ಪ್ರಸ್ತಾಪಿಸಿದ ವ್ಯಾಟ್ ಏನಾದರೂ ವಿಧಿಸಿದೆಯೇ ತಿಳಿಸುವುದು?

(ಇ) ಬೀಡಿಯ ಮೇಲೆ ತೆರಿಗೆ ಭಾರ ಜಾಸ್ತಿಯಾಗಿ ಬೀಡಿ ಕಂಪನಿಗಳು ಬಾಗಿಲು ಮುಚ್ಚುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಈ) ಹಾಗಿದ್ದಲ್ಲಿ, ಈ ಸಮಸ್ಯೆ ಬಗೆಹರಿಸಲು ಬೀಡಿ ಮೇಲಿನ ಸುಂಕ, ತೆರಿಗೆ ಕಡಿಮೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು)

(ಅ) ಪ್ರತಿ ಒಂದು ಸಾವಿರ ಕೈಯಿಂದ ಮಾಡಿದ ಬೀಡಿಗಳಿಗೆ ರೂ. 7 ರಿಂದ 11ಕ್ಕೆ ಮತ್ತು ಯಂತ್ರದಿಂದ ಮಾಡಿದ ಬೀಡಿಗಳಿಗೆ ರೂ. 17 ರಿಂದ ರೂ. 24ಕ್ಕೆ ಕೇಂದ್ರ ಅಬಕಾರಿ ಸುಂಕವನ್ನು ಏರಿಸಲಾಗಿದೆ.

(ಆ) ದಿ:01.04.2007 ರಿಂದ ಬೀಡಿಯ ಮೇಲೆ ಶೇ. 12.5ರ ವ್ಯಾಟನ್ನು ವಿಧಿಸಲಾಗಿತ್ತು. ಹಾಗೂ ಅದನ್ನು ಈಗ 15.05.2007 ರಿಂದ ವಿನಾಯಿತಿಗೊಳಿಸಲಾಗಿದೆ.

(ಇ) ದಿ: 15.05.2007ರಿಂದ ತೆರಿಗೆ ವಿನಾಯಿತಿ ನೀಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಉದ್ಭವಿಸುವುದಿಲ್ಲ.

424. ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಏಪ್ರಿಲ್ ನಂತರ ಬರ ಪರಿಹಾರ ಯೋಜನೆಯಲ್ಲಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;

(ಆ) ದಕ್ಷಿಣ ಕನ್ನಡ ಜಿಲ್ಲೆಯ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ಏಪ್ರಿಲ್ 2007ರ ನಂತರ ಪರಿಹಾರ ಮತ್ತು ಪ್ರವಾಹ ಪರಿಹಾರಕ್ಕಾಗಿ ಬಿಡುಗಡೆ ಮಾಡಿದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.

(ಆ) ಸರ್ಕಾರದಿಂದ ನೇರವಾಗಿ ತಾಲ್ಲೂಕುವಾರು ಅನುದಾನ ಬಿಡುಗಡೆ ಮಾಡುವುದಿಲ್ಲ. ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ತುರ್ತು ಪರಿಹಾರ ವಿತರಣೆಗೆ ಕೆಳಕಂಡಂತೆ ತಾಲ್ಲೂಕುಗಳಿಗೆ ಅನುದಾನ ಹಂಚಿಕೆ ಮಾಡಿರುತ್ತಾರೆ.